<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ  ನ್ಯಾಯಾಲಯ , ದಾವಣಗೆರೆ.</u>

<u>SC.16/2026</u>

| <u>ಫಿರ್ಯಾದಿದಾರರು</u> | <u>ವಿರುದ್ಧ</u> | <u>ಆರೋಪಿತರು</u> |
|---|---|---|
| ರಾಜ್ಯದ ಪರವಾಗಿ ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ. | | 1) ಧನುಷ್ ಯಾನೆ ಧನುಷ್. ವೈ.ಆರ್. ಮತ್ತು ಇತರರು |

## <u>**ದೋಷಾರೋಪಣೆ**</u>

ನಾನು ಶ್ರೀ. ಕೃಷ್ಣಮೂರ್ತಿ ಆರ್. ಪಡಸಲಗಿ., ಬಿ.ಎಸ್ಸಿ ಎಲ್.ಎಲ್.ಎಂ. ಹೆಚ್.ಡಿ.ಎಸ್.ಸಿ., 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ :-

ಆರೋಪಿತರಾದ- 1

1) ಧನುಷ್ ಯಾನೆ ಧನುಷ್ ವೈ.ಆರ್. ತಂದೆ ರಂಗಪ್ಪ.ಟಿ., ವಯಸ್ಸು 21 ವರ್ಷ, ವಾಸಃ 2 ನೇ ಮೇನ್, 12 ನೇ ಕ್ರಾಸ್, ಭಗತ್ ಸಿಂಗ್ ನಗರ, ದಾವಣಗೆರೆ.

2) ಸಂದೀಪ ಯಾನೆ ಸಂದೀಪ್ ತಂದೆ ಮಂಜಪ್ಪ, ವಯಸ್ಸು 22 ವರ್ಷ, ವಾಸಃ ಲಿಂಗಾಪುರ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

3) ಕಿರಣ್ ಕುಮಾರ್ ಕೆ.ಎಂ. ತಂದೆ ಮಂಜಪ್ಪ.ಕೆ., ವಯಸ್ಸು 21 ವರ್ಷ, ವಾಸಃ ನಂ.695/7, 7 ನೇ ಮೇನ್, 7 ನೇ ಕ್ರಾಸ್, 60 ಅಡಿ ರಸ್ತೆ, ದಾವಣಗೆರೆ.

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ದಿಃ 19-11-2024 ರಂದು ದಾವಣಗೆರೆಯ ಎಂ.ಸಿ.ಸಿ. ಬಿ ಬ್ಲಾಕ್ ನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮದ್ಯಾಹ್ನ 1-30 ಗಂಟೆಗೆ ಸಾಕ್ಷಿ-1, 2, 5 ರಿಂದ ಸಾಕ್ಷಿ-11 ಹಾಗೂ ಸಾಕ್ಷಿ-14 ರವರೊಂದಿಗೆ ಇತರೆ ವಿದ್ಯಾರ್ಥಿಗಳೊಂದಿಗೆ ಸ್ಟೇಜಿನ ಮುಂಭಾಗದಲ್ಲಿ ಡ್ಯಾನ್ಸ್ ಮಾಡುತ್ತಿರುವಾಗ 1 ಮತ್ತು 2 ನೇ ಆರೋಪಿತರಾದ ನಿಮಗೆ ಸಾಕ್ಷಿ-1 ರವರ ಕೈತಾಗಿ 2 ನೇ ಆರೋಪಿಯಾದ ನೀನು ಜಾರಿಬಿದ್ದಿದ್ದು, ಸಾಕ್ಷಿ-1 ರವರು 2 ನೇ ಆರೋಪಿಯಾದ ನಿನಗೆ ಮೇಲೆತ್ತಿದಾಗ 2 ನೇ ಆರೋಪಿಯಾದ ನೀನು ಸಾಕ್ಷಿ-1 ರವರಿಗೆ ತಡೆದು ನೀನೇ ನನಗೆ ಬೀಳಿಸಿದ್ದು ಎಂದು ಸಾಕ್ಷಿ-1 ರವರಿಗೆ ಕೈಗಳಿಂದ ಕಪಾಳಕ್ಕೆ ಹೊಡೆದು 1 ರಿಂದ 3 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡುತ್ತಿರುವಾಗ ಸಾಕ್ಷಿ-2, 5

ರಿಂದ 11 ಹಾಗೂ ಸಾಕ್ಷಿ-14 ರವರುಗಳು ಮತ್ತು ಸಾಕ್ಷಿ-12, 13 ರವರು ತಿಳುವಳಿಕೆ ನೀಡಿ ಜಗಳ ಬಿಡಿಸಿ ಕಳುಹಿಸಿದ್ದು, ಕಾರ್ಯಕ್ರಮ ಮುಂದುವರೆದಿದ್ದು, 1 ಮತ್ತು 3 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ನಿನ್ನ ಜೊತೆ ಮಾತನಾಡುವುದು ಇದೆ ಕಾಲೇಜು ಹೊರಗೆ ಬಾ ಎಂದು ಕರೆದಿದ್ದರಿಂದ ಸುಮಾರು ಮದ್ಯಾಹ್ನ 02-20 ಗಂಟೆಗೆ ಸಾಕ್ಷಿ-1 ಮತ್ತು ಸಾಕ್ಷಿ-2 ರವರು ಕಾಲೇಜಿನ ಹೊರಗಡೆ ಕಾಲೇಜಿಗೆ ಬರುವ ಮುಂಭಾಗದ ರಸ್ತೆಯ ಬಳಿ ಹೋದಾಗ 1 ಮತ್ತು 3 ಆರೋಪಿತರಾದ ನೀವು ಸಾಕ್ಷಿ-1 ರವರನ್ನು ತಡೆದು ನಿಲ್ಲಿಸಿದ್ದು, ಆ ಪ್ರಕಾರ ಕಲಂ 126(2) ಜೊತೆ 3(5) ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-1 ರವರನ್ನು ತಡೆದು ನಿಲ್ಲಿಸಿದ್ದಲ್ಲದೇ, 1 ರಿಂದ 3 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಪ್ರಕಾರ ಕಲಂ 352 ಜೊತೆ 3(5) ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

3. ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-1 ರವರನ್ನು ತಡೆದು ನಿಲ್ಲಿಸಿದ್ದಲ್ಲದೇ, ಕಾಲೇಜಿನಲ್ಲಿ ನಡೆದ ಜಗಳದ ವಿಚಾರವಾಗಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರ ಕಪಾಳಕ್ಕೆ ಕೈಗಳಿಂದ ಹೊಡೆದು ಜೊತೆಯಲ್ಲಿದ್ದ 3 ನೇ ಆರೋಪಿಯಾದ ನೀನು ಕೈಗಳಿಂದ ಸಾಕ್ಷಿ-1 ರವರ ಮೈಕೈಗೆ ಹೊಡೆದಿದ್ದು, ಆ ಪ್ರಕಾರ ಕಲಂ 115(2) ಜೊತೆ 3(5) ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-1 ರವರನ್ನು ತಡೆದು ನಿಲ್ಲಿಸಿ, ಕೈಗಳಿಂದ ಹಲ್ಲೆ ಮಾಡಿದ್ದಲ್ಲದೇ, ನಂತರ 1 ಆರೋಪಿಯಾದ ನೀನು ಕೊಲೆ ಮಾಡುವ ಉದ್ದೇಶದಿಂದ ತನ್ನ ಬಳಿಯಿದ್ದ ಬಟನ್ ಚಾಕುವಿನಿಂದ ಸಾಕ್ಷಿ-1 ರವರಿಗೆ ಹೊಟ್ಟೆಯ ಕೆಳಭಾಗಕ್ಕೆ ಚುಚ್ಚಿ ರಕ್ತಗಾಯವುಂಟುಮಾಡಿದ್ದು, ಆ ಪ್ರಕಾರ ಕಲಂ 118(1) ಜೊತೆ 3(5) ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

5. ಐದನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-1 ರವರನ್ನು ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿದ್ದಲ್ಲದೇ, 1 ಆರೋಪಿಯಾದ ನೀನು ಕೊಲೆ ಮಾಡುವ ಉದ್ದೇಶದಿಂದ ತನ್ನ ಬಳಿಯಿದ್ದ

ಬಟನ್ ಚಾಕುವಿನಿಂದ ಸಾಕ್ಷಿ-1 ರವರಿಗೆ ಹೊಟ್ಟೆಯ ಕೆಳಭಾಗಕ್ಕೆ ಚುಚ್ಚಿ ರಕ್ತಗಾಯವುಂಟುಮಾಡಿದ್ದು, ಆ ಪ್ರಕಾರ ಕಲಂ 109 ಜೊತೆ 3(5) ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

6. ಕೊನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-1 ರವರನ್ನು ತಡೆದು ನಿಲ್ಲಿಸಿ, ಕೈಗಳಿಂದ ಹಾಗೂ ಆಯುಧದಿಂದ ಹಲ್ಲೆ ಮಾಡಿದ್ದಲ್ಲದೇ, ಬಳಸಿದ ಬಟನ್ ಚಾಕುವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹೋಗುವ ರಸ್ತೆ ಬಳಿ ಇರುವ ತಾನ್ವಿ ಲೆಡೀಸ್ ಪಿಜಿ ಅಂತಾ ಬೋರ್ಡ ಇರುವ ಸ್ಥಳದಲ್ಲಿ ಬಿಸಾಕಿ ಸಾಕ್ಷಿನಾಶಪಡಿಸಿದ್ದು, ಆ ಪ್ರಕಾರ ಕಲಂ 238 ಜೊತೆ 3(5) ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

7. ಇಂದು 17 ನೇ ತಾರೀಖು ಜೂನ್ ಮಾಹೆ 2026

( ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಲು ತಿಳಿಸಿ,ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು.)

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.</u>

<u>SC.16/2026</u>

| <u>ಫಿರ್ಯಾದಿದಾರರು</u> | <u>ವಿರುದ್ಧ</u> | <u>ಆರೋಪಿತರು</u> |
|---|---|---|
| ರಾಜ್ಯದ ಪರವಾಗಿ ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ. | | 1) ಧನುಷ್ ಯಾನೆ ಧನುಷ್. ವೈ.ಆರ್. ಮತ್ತು ಇತರರು |

<u>ಆರೋಪಿಯ ಹೇಳಿಕೆ</u>

ಪ್ರಶ್ನೆ1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

ದಿನಾಂಕ. 17-06-2026

| ಆರೋಪಿತರ ಹೆಸರು | ಆರೋಪಿತರ ಸಹಿ |
|---|---|
| 1) ಧನುಷ್ ಯಾನೆ ಧನುಷ್ ವೈ.ಆರ್. | |
| 2) ಸಂದೀಪ ಯಾನೆ ಸಂದೀಪ್ | |
| 3) ಕಿರಣ್ ಕುಮಾರ್ ಕೆ.ಎಂ. | |